| ಸಾಮರ್ಥ್ಯ | ಚಟುವಟಿಕೆಗಳು | ಅವಧಿ |
| --- | --- | --- |
| ಓದುವುದು | ಕನ್ನಡ ಮೂಲ ಅಕ್ಷರಗಳ ಸ್ಪಷ್ಟ ಪರಿಚಯ<br>1. ಮೂಲಾಕ್ಷರಗಳ ಪೇಪರ್ ಕಟ್ಟಿಂಗ್ ಮಾಡಿಸುವುದು<br>2. ಚಿತ್ರಕ್ಕನುಗುಣವಾಗಿ ಅಕ್ಷರಗಳ ಜೋಡಣೆ<br>ಉದಾ-ಅರಸ ಚಿತ್ರಕ್ಕೆ-ಅ ಅಕ್ಷರ ಜೋಡಣೆ<br>ಏಣಿ-ಏ ಜೋಡಣೆ<br>**ಮೌಲ್ಯಮಾಪನ**<br>( ಪೇಪರ್‌ನಲ್ಲಿ ಕಟ್ಟಿಂಗ್ ಮಾಡಿದ ಅಕ್ಷರ ತೋರಿಸುತ್ತಾ ಮೌಲ್ಯಮಾಪನ) | 6 ಅವಧಿ |
| ಓದುವುದು | ಕಾಗುಣಿತ<br>✓ ಸ್ವರಾಕ್ಷರ ಮತ್ತು ವ್ಯಂಜನಾಕ್ಷರಗಳನ್ನು ಮತ್ತು ಕಾಗುಣಿತ (ಗುಣಿತಾಕ್ಷರ) ವನ್ನು ಪೇಪರ್ ಕಟ್ಟಿಂಗ್ ಮಾಡಿಸಿಕೊಂಡು ಜೋಡಿಸಿ ಆಟದ ಮೂಲಕ ಓದಿಸುವುದು( ಈಗಾಗಲೇ ಮೊದಲ ಹಂತದಲ್ಲಿ ವ್ಯಂಜನ ಮತ್ತು ಸ್ವರಾಕ್ಷರಗಳ ಪೇಪರ್ ಕಟಿಂಗ್ ಮಾಡಿಕೊಂಡಿರುತ್ತೇವೆ.)<br>ಕ್+ಅ=ಕ<br>ಕ್+ಆ=ಕಾ<br>( ಕ್ ಅಕ್ಷರ ಹಿಡಿದ ವಿದ್ಯಾರ್ಥಿಯನ್ನು ನಿಲ್ಲಿಸುವುದು ಅವನ ಪಕ್ಕದಲ್ಲಿ ಅ ಅಕ್ಷರದವನನ್ನು ನಿಲ್ಲಿಸಿ ಅವೆರಡರ ಮಧ್ಯ ಅಧ್ಯಾಪಕರು(+) ನಿಂತು ಜೋಡಿಸಿ ಉಂಟಾಗುವ ಅಕ್ಷರ ಯಾವುದೆಂದು ಕೇಳಿದಾಗ ಕ ಅಕ್ಷರವನ್ನು ರಚಿಸಿದವ ಎದ್ದು ಬಂದು ಈ ಎರಡು ಅಕ್ಷರದ ಮುಂದೆ ಸೇರಿಕೊಳ್ಳುತ್ತಾನೆ ಹೀಗೆಯೇ ಪುನಾರಾವರ್ತನೆ ಮಾಡಬಹುದು<br>✓ ಕಾಗುಣಿತ ಬಳ್ಳಿ ಓದಿಸುವುದು ( ಪದ್ಯ ರೂಪದಲ್ಲಿ)<br>ಕ್ ತಲೆಕಟ್ಟು-ಕ<br>ಕ್ ತಲೆಕಟ್ಟಂದೀರ್ಘ- ಕಾ<br>ಕ್ ಗುಣಿಸು -ಕಿ<br>ಕ್ ಗುಣಿಸಿಂದೀರ್ಘ ಕೀ<br>ಕ್ ಕೊಂಬು ಕು<br>ಕ್ ಕೊಂಬಿಂದೀರ್ಘ -ಕೂ<br>ಕ್ ಕೊಟ್ರ ಸುಳಿ-ಕೃ<br>ಕ್ ಕೈತ್ವಾ-ಕೈ<br>ಕ್ ಕೋತ್ವಾ-ಕೊ<br>ಕ್ ಕೊಕೊಂದದೀರ್ಘ ಕೋ<br>ಕ್ ಕೌತ್ವಾ-ಕೌ<br>ಕ್ ಕೊಂದ ಸೊನ್ನೆ-ಕಂ<br>ಕ್ ಕೆರಡ ಸೊನ್ನೆ -ಕಃ<br><br>(ಪ್ರಾಥಮಿಕ ಶಾಲೆಯ ಒಂದನೇ ತರಗತಿಯ ಪಠ್ಯದಲ್ಲಿದೆ)<br>✓ ಕಾಗುಣಿತವನ್ನು ಒಳಗೊಂಡ ಸರಳ ಪದ ಓದಿಸುವುದು( ಪ್ರಾಣಿ, ಪಕ್ಷಿ, ಮನುಷ್ಯ ಇತ್ಯಾದಿ)<br>ಉದಾ-ಕಮಲ, ಕಡಗ,ಅರಸ,ಆಟ ಇತ್ಯಾದಿ<br>ವರ್ತಮಾನ ಪತ್ರಿಕೆ ನೀಡಿ ಅದರ ಮುಖ್ಯಾಂಶದಲ್ಲಿರುವ ಕಾಗುಣಿತ ಗುರುತಿಸಿ ಓದಿಸುವುದು.<br>✓ ನೀವು ಕನ್ನಡದ ಯಾವುದೇ ಗದ್ಯ ಅಥವಾ ಪದ್ಯ ಮಾಡುತ್ತಿದ್ದರೆ ಬುನಾದಿ ಸಾಮರ್ಥ್ಯ ಹೊಂದಿರದ ಮಕ್ಕಳಿಗೆ ಆ ಪದ್ಯ ಅಥವಾ | 10ಅವಧಿ |

| | | |
|---|---|---|
| | ಪಾಠದಲ್ಲಿ ಬರುವ ಕಾಗುಣಿತ ಗುರುತಿಸಲು ಹೇಳಿ ಮೌಲ್ಯಮಾಪನ ಮಾಡಬಹುದು<br>✓ ಚಂದಮಾನ ಬಾಲಮಂಗಳದ ಚಿತ್ರಕತೆ ಸಂಗ್ರಹಿಸಿ ಓದುವುದು<br>ಒತ್ತಕ್ಷರ ಓದಿಸುವುದು<br>✓ ಮೊದಲು ಸಜಾತೀಯ ಒತ್ತಕ್ಷರಗಳನ್ನು ಪರಿಚಯಿಸುವುದು<br>✓ ವಿಜಾತೀಯ ಒತ್ತಕ್ಷರಗಳನ್ನು ಪರಿಚಯಿಸುವುದು<br>✓ ಒತ್ತಕ್ಷರವನ್ನು ಸ್ವರಭಾರದೊಂದಿಗೆ ಓದಿಸುವುದು<br>✓ (ಸ್ವರಭಾರದೊಂದಿಗೆ ಓದಿದರೆ ಮಾತ್ರ ಒತ್ತಕ್ಷರವೆಂದು ತಿಳಿಯುತ್ತದೆ. ಒತ್ತಕ್ಷರವಿರುವ ಅಕ್ಷರವನ್ನು ಒತ್ತಿ ಉಚ್ಚರಿಸ ಬೇಕು)<br>✓ ಸಜಾತೀಯ ಒತ್ತಕ್ಷರದಿಂದ ಕೂಡಿದ ಸರಳ ಪದ ಓದಿಸುವುದು<br>ಉದಾ–ಅಕ್ಕ, ಅಣ್ಣ, ಅಮ್ಮ, ತಮ್ಮ ,ಪೆನ್ನು<br>✓ ವಿಜಾತೀಯ ಒತ್ತಕ್ಷರದಿಂದ ಕೂಡಿದ ಪದ ಓದಿಸುವುದು<br>ಉದಾ–ರಕ್ತ, ಕತ್ತಿ, ರಸ್ತೆ ( ಚಿರಪರಿಚಿತ ಶಬ್ಬ)<br>✓ ವರ್ತಮಾನ ಪತ್ರಿಕೆಯನ್ನು ನೀಡಿ ಸಜಾತೀಯ ಒತ್ತಕ್ಷರ ಮತ್ತು ವಿಜಾತೀಯ ಒತ್ತಕ್ಷರವನ್ನು ಬೇರೆಬೇರೆ ಒಣ್ಣದದಿಂದ ಗುರುತು ಮಾಡುವಂತೆ ಸೂಚಿಸುವುದು (ಪೇಸ್ಟ ಮಾಡುವುದು)<br>✓ ಒತ್ತಕ್ಷರವನ್ನು ಹೇಳಿ ಪದ ರಚಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು( ಈ ಎಲ್ಲಾ ಕ್ರಿಯೇ ನೀವು ಯಾವ ಪಾಠ/ಪದ್ಯ ಮಾಡುತ್ತೀರಿ ಅಲ್ಲೇ ನಡೆಸಬಹುದು)<br>✓ ಒತ್ತಕ್ಷರವನ್ನು ಬಿಡಿಸಿ ಓದಲು ಸೂಚಿಸುವುದು<br>ಕ್+ಕ+ಅ=ಕ್ಕ | |

<table>
<tr><td></td><td>ಮೌಲ್ಯಮಾಪನ</td><td></td></tr>
<tr><td>ಸಾಮರ್ಥ್ಯ</td><td>ಚಟುಚಟಿಕೆ</td><td>ಅವಧಿ</td></tr>
<tr><td>ಬರೆಯುವುದು</td><td>ವರ್ಣಮಾಲೆ<br>✓ ವರ್ಣಮಾಲೆಯ ಮೂಲಾಕ್ಷರವನ್ನು ಕೋಪಿ ಬರೆಸುವುದು<br>✓ ಈಗಾಗಲೇ ಪೇಪರ್ ಕಟ್ಟಿಂಗ್ ಮಾಡಿದ ಮೂಲಾಕ್ಷರವನ್ನು ಮೇಜಿನ ಮೇಲೆ ಚೆಲ್ಲಾ ಹರಡಿ ಮರು ಜೋಡಿಸುವಂತೆ ಸೂಚಿಸುವುದು.<br>ಕಾಗುಣಿತ ಬರೆಸುವುದು<br>✓ ಕಾಗುಣಿತ ಬಳ್ಳಿಯ ಕೋಪಿ ದಿನ ಬರೆಸುವುದು<br>✓ ಈಗಾಗಲೇ ಕತ್ತರಿಸಿ ಇಟ್ಟ ಪೇಪರ ಕಟ್ಟಿಂಗ್ ಅಕ್ಷರವನ್ನು ಮೇಜಿನ ಮೇಲೆ ಹರಡಿ ಪುನಃ ಜೋಡಿಸುವಂತೆ ಸೂಚಿಸುವುದು<br>✓ ಸರಳವಾದ ಒತ್ತಕ್ಷರವಿಲ್ಲದ ಹೆಸರುಗಳನ್ನು ಬರೆಸುವುದು( ಪ್ರಾಣಿ, ಪಕ್ಷಿ, ಮನುಷ್ಯ)<br>ಉದಾ–ಕನಕ, ಕಮಲ,ಕಾಗೆ, ಗಿಳಿ, ಹುಲಿ,ದನ ಇತ್ಯಾದಿ<br>✓ ವರ್ತಮಾನ ಪತ್ರಿಕೆ ನೀಡಿ ತಮಗೆ ತಿಳಿದ ಉಚ್ಚರಿಸಲು ಆಗುವ ಪದಗಳನ್ನು ಒರೆಯುವಂತೆ ಸೂಚಿಸುವುದು.<br>✓ ನೀವು ಮಾಡುವ ಪಾಠದ ಸರಳ ಪದಗಳನ್ನು ಆಯ್ದು ಬರೆಯಲು ಸೂಚಿಸುವುದು<br>ಕಾಗುಣಿತ ಸಂಬಂಧಿ ಉಕ್ತಲೇಖನ ನೀಡುವುದು<br>ಆ | ಡು<br>ನೆ | ಲ<br>✓ ಕಾಗುಣಿತದ ಮೇಲೆ ಪದಬಂಧ ಆಟ ಆಡಿಸುವುದು<br>✓ ವಿದ್ಯಾರ್ಥಿಯನ್ನು ಕರಿಹಲಗೆಯ ಸಮೀಪ ಕರೆದು ಒಂದು ಶಬ್ಬ ಬರೆಯಲು ಸೂಚಿಸುವುದು ಅನಂತರ ಇನ್ನೊಬ್ಬ ವಿದ್ಯಾಥಿಯನ್ನು ಕರೆದುಮೊದಲ ವಿದ್ಯಾರ್ಥಿ ಬರೆದ ಪದವನ್ನು ಅನುಸರಿಸಿ ಇನ್ನೊಂದು ಪದ ಅಥವಾ ಬೇರೆ ಪದ ಬರೆಯುವುದು<br><br>( ಇದನ್ನೇ ವಿಸ್ತರಣೆ ಮಾಡಬಹುದು)<br>✓ ವಾರ್ತಾಪತ್ರಿಕೆಯನ್ನು ಉಪಯೋಗಿಸಿಕೊಂಡು ಕಾಗುಣಿತ ಗುರುತಿಸುವ ಆಟ ಆಡಿಸುವುದು<br>( ಇಬ್ಬರು ವಿದ್ಯಾರ್ಥಿಗಳಿಗೆ ಎರಡು ತುಂಡು ವರ್ತಮಾನ ಪತ್ರಿಕೆ ನೀಡಿ ಅವರಿಬ್ಬರೆ ಅಕ್ಷರವನ್ನು ಗುರುತಿಸಿ,ಗುರುತಿಸಿದ ಅಕ್ಷರವನ್ನು ನೋಟ್ಸ ಪುಸ್ತಕದಲ್ಲಿ ಬರೆಯುವುದು. ಯಾರು ಹೆಚ್ಚು ಅಕ್ಷರವನ್ನು ಗುರುತಿಸಿದ್ದಾರೆ ಎನ್ನುದನ್ನು ಮೌಲ್ಯಮಾಪನ ಮಾಡುವುದು)<br>✓ ಪದ ಚಕ್ರ ರಚನೆ ಮಾಡುವುದು</td><td>10ಅವಧಿ</td></tr>
</table>



## ಒತ್ತಕ್ಷರ ಬರೆಸುವುದು

- ✓ ಒತ್ತಕ್ಷರವನ್ನು ಕೋಪಿ ಬರೆಸುವುದು
- ✓ ಒತ್ತಕ್ಷರದಿಂದ ಕೋಡಿದ ಪದವನ್ನು ಕೋಪಿ ಬರೆಸುವುದು
- ✓ ಒತ್ತಕ್ಷರದಿಂದ ಕೂಡಿದ ಹೆಸರು ಬರೆಯಲು ಹೇಳುವುದು
- ✓ ಉದಾ- ರಮ್ಯ , ಪ್ರದೀಪ, ಸಾವಿತ್ರಿ,
- ✓ ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರದದಿಂದ ಕೂಡಿದ ಪದದ ಉಕ್ತಲೇಖನ ನೀಡಿ( ಕರಿ ಹಲಗೆಯ ಮೇಲೆ ಬರೆದು) ಪ್ರತ್ಯೇಕಿಸುವಂತೆ ಸೂಚಿಸುವುದು
- ✓ ಒಂದು ಒತ್ತಕ್ಷರ ನೀಡಿ ಅದು ಒಳಗೊಂಡ ಪದಗಳನ್ನು ಬರೆಯಲು ಸೂಚಿಸುವುದು

| ಕ್ಕ | ಮ್ಮ |
|---|---|
| ಅಕ್ಕ | ಅಮ್ಮ |
| ತಕ್ಕಡಿ | ತಮ್ಮ |
| ಸಕ್ಕರೆ | ಚಮ್ಮಾರ |
| ಚಕ್ಕುಲಿ | ಕಮ್ಮಾರ |
| ಪಕ್ಕ | ದಮ್ಮಡಿ |

## ಮೌಲ್ಯಮಾಪನ

### ಪ್ರಶ್ನೆಪತ್ರಿಕೆ ಮಾದರಿ
### (ಬಿಟ್ಟ ಸ್ಥಳ ತುಂಬಿರಿ)

| ವ್ಯಂಜನ | ಸ್ವರ | ಗುಣಿತಾಕ್ಷರ |
|---|---|---|
| ಕ್ | ಅ | ----- |
| ಚ್ | ---- | ಚಾ |
| ---- | ಓ | ಚೋ |
| ಟ್ | ---- | ಟೀ |
| ತ್ | ಐ | ---- |

## ಸರಳವಾಕ್ಯ ( ಓದುವುದು–ಬರೆಯುವುದು)

1. ಎರಡು ಸರಳ ಪದಗಳಿಂದ ಕೂಡಿದ ವಾಕ್ಯ ರಚನೆ

   ಉದಾ–ರಾಮನು ಬಂದನು

   ಅವನು ಹೋದನು

   ಅವಳು ಬಂದಳು

2. ಸರಳ ವಾಕ್ಯ ಸಂಭಾಷಣೆ
   - ನೀನು ಯಾರು?
   - ನಿನ್ನ ಹೆಸರು?
   - ನಿನ್ನ ಶಾಲೆ?

3. ಎರಡಕ್ಕಿಂತ ಹೆಚ್ಚು ಪದಗಳಿಂದ ಕೂಡಿದ ವಾಕ್ಯ ರಚನೆ
   - ನಿನ್ನ ತಂದೆಯ ಹೆಸರೇನು?
   - ನಿನ್ನ ಅಮ್ಮನ ಹೆಸರೇನು?
   - ನಿನ್ನ ಶಾಲೆಯ ಹೆಸರೇನು?

4. ವಿದ್ಯಾರ್ಥಿಗೆ ಇಷ್ಟವಾದ ವಿಚಾರದ ಕುರಿತು ಮಾತನಾಡಲು ಹೇಳುವುದು( ಆ ಶಾಲಾ ಪರಿಸರಕ್ಕೆ ಅನುಗುಣವಾಗಿ)
   1. ದನ
   2. ಪುಸ್ತಕ
   3. ಶಾಲೆ

## ಸರಳ ವಾಕ್ಯ ರಚನೆ

1. ಚಿತ್ರ ನೋಡಿ ಸರಳವಾಕ್ಯದಲ್ಲಿ ಬರೆಯುವುದು

ರೈತ

ಮರ

2. ಪಾತ್ರ ಕೊಟ್ಟು ಸಂಭಾಷಣೆ( ಸನ್ನಿವೇಷ ಅಧ್ಯಾಪಕರು ಸೂಚಿಸುವುದು)

ಅಪ್ಪ–ಮಗ

ಅದ್ಯಾಪಕ–ವಿದ್ಯಾರ್ಥಿ

ವೈದ್ಯರು–ರೋಗಿ

3 ಪದಗಳನ್ನು ಕೊಟ್ಟು ಸ್ವಂತ ವಾಕ್ಯ ಮಾಡುವುದು

4. ಚಿತ್ರ ಕೊಟ್ಟು ಕತೆ ಬರೆಯುವುದು( ಸಣ್ಣ

| | | |
|---|---|---|
| | ತರಗತಿಯ ಪಾಠದ ಚಿತ್ರ)<br>ಉದಾ- ನರಿ ಮತ್ತು ದ್ರಾಕ್ಷಿ<br>ಮೊಲ ಮತ್ತು ಆಮೆಯ ಸ್ಪರ್ಧೆ<br>**ಮೌಲ್ಯಮಾಪನ** | |

## ಹೆಚ್ಚಿನ ಓದು

೧. ನೇರ ಮೂಲ ಅಕ್ಷರಗಳೆ ಒತ್ತಕ್ಷರ (ಸಣ್ಣ ಗಾತ್ರದ ಪೂರ್ಣರೂಪ)
ಖ, ಟ, ಣ, ಜ, ಬ, ವ

೨. ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರ (ಅಕ್ಷರದ ತಲೆಕಟ್ಟಿಲ್ಲದ ರೂಪ)
ಕಿ, ಗಿ, ಚಿ, ಠಿ, ಡಿ, ಢಿ, ಫಿ, ಥಿ, ಥಿ, ದಿ, ಧಿ

೩. ಭಿನ್ನ ರೂಪಗಳು ((ಮ ( ್ಮ ), ನ ( ್ನ ), ತ ( ್ತ ) ರ ( ್ರ ), ಲ ( ್ಲ ), ಯ ( ್ಯ )
ಭಿನ್ನರೂಪದ್ ಒತ್ತಕ್ಷರಗಳು.

ಶಿಕ್ಷಕರು ಮಾದರಿ ವಾಚನ ಮಾಡುವುದು.

೮. ಶಿಕ್ಷಕರು ಓದುವಾಗ ಸರಿಯಾದ ಭಾವ ಅರ್ಥವಾಗುವಂತೆ ಓದಬೇಕು.

೯. ಮಕ್ಕಳು ಸರಾಗವಾಗಿ ಓದಲು ಶಕ್ತರನ್ನಾಗಿ ಮಾಡಲು ಅಕ್ಷರ ಪುನರಾವರ್ತನೆಯ ಅಭ್ಯಾಸವನ್ನು ಬಳಸುವುದು.

೧೦. ಶಿಕ್ಷಕರು ಸರಿಯಾದ ನಿಲುಗಡೆ ಕೊಟ್ಟು ಓದುವುದರಿಂದ ಅರ್ಥಸ್ಪಷ್ಟವಾಗುವುದು.

೧೧. ಲ, ಳ, ಅ, ಹ. ಈ ಅಕ್ಷರಗಳು ಬಾಯಿಯ ಯಾವ ಸ್ಥಾನದಲ್ಲಿ ಹೇಗೆ ಉಚ್ಚಾರಗೊಳ್ಳುತ್ತವೆ ಎಂಬ ಸ್ಪಷ್ಟ ಪರಿಕಲ್ಪನೆಯನ್ನು ತಾವೇ ಆ ಶಬ್ದಗಳನ್ನು ಉಚ್ಚಾರ ಮಾಡಿ ತೋರಿಸುವ ಮೂಲಕ ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು.

೧೨. ಶಿಕ್ಷಕರು ಉಕ್ತಲೇಖನ ನೀಡುವಾಗ ಒಂದೊಂದು ಪದವನ್ನು ಎರಡೆರಡು ಸಲ ಗಟ್ಟಿಯಾಗಿ ನಿಧಾನವಾಗಿ ಸ್ಪಷ್ಟವಾಗಿ ಉಚ್ಛರಿಸಬೇಕು. ಇದರಿಂದ ವಿದ್ಯಾರ್ಥಿಗಳು ಸ್ಪಷ್ಟವಾಗಿ ಆಲಿಸಿಕೊಂಡು ಸರಿಯಾಗಿ ಬರೆಯಲು ಸಹಾಯಕವಾಗುತ್ತದೆ.

೧೩. ಅನುಸ್ವಾರಕ್ಕೆ ನಿಖರವಾದ ಉಚ್ಚಾರಣೆಯಿಲ್ಲ ಅನುಸ್ವಾರ (ಂ) ದ ನಂತರ ಯಾವ ವರ್ಗೀಯ ವ್ಯಂಜನ ಬಂದಿದೆಯೋ ಅದರ ಅನುನಾಸಿಕ ಉಚ್ಚಾರಣೆಗೆ ಬರುತ್ತದೆ ಎಂಬುವುದನ್ನು ತಿಳಿಸಬೇಕು.